## ಕಾಡುವಂತಾದ ಸೀತಾರಾಮ

ಝೀ ಕನ್ನಡದ 'ಸೀತಾರಾಮ' ಮುಕ್ತಾಯವಾಗಿದೆ. ಕೊನೆಯ ಕಂತಿನಲ್ಲಿ ಭಾರ್ಗವಿ ಪಾತ್ರಧಾರಿ ಪೂಜಾ ಲೋಕೇಶ್ ತಾನೆಂತಹ ಅಭಿಜಾತ ಕಲಾವಿದೆ ಎನ್ನುವುದನ್ನು ನಿರೂಪಿಸಿದ್ದಾರೆ. ಪ್ರೀತಿಯ ಮತ್ತೊಂದು ಆಯಾಮವನ್ನು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಸಿದ್ದಾರೆ.

ವಿಶಿಷ್ಟವಾದ ಕತೆಗೆ ಭಾವಪೂರ್ಣ ಅಭಿನಯದಿಂದ ಗಗನ್ ಚಿನ್ನಪ್ಪ, ವೈಷ್ಣವಿ ಗೌಡ, ರೀತು ಸಿಂಗ್, ಅಶೋಕ್, ಮೇಘನಾ ಶಂಕರಪ್ಪ, ಪೂರ್ಣಚಂದ್ರ, ಜಯದೇವ, ಸಿಂಧೂ ಮಹೇಶ್, ಮುಖ್ಯಮಂತ್ರಿ ಚಂದ್ರು ಸೇರಿ ಸಹಕಲಾವಿದರು ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಶೀರ್ಷಿಕೆ ಗೀತೆ ಬಹುಕಾಲ ನೆನಪಿನಲ್ಲಿ ಉಳಿಯುವಂತೆ ಮಾಡಿದ್ದಾರೆ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ಸ್ವರ್ಣಪದಕ ಮತ್ತಷ್ಟು ಬರಲಿ

ಚಂದನ ವಾಹಿನಿಯ 'ವಾರದ ವ್ಯಕ್ತಿ' ಅತ್ಯುತ್ತಮ ಕಾರ್ಯಕ್ರಮ. ನಿರ್ದೇಶಕ ಗಿರೀಶ ಕಾಸರವಳ್ಳಿ ಅವರ ಸಂದರ್ಶನ ತುಂಬ ಚೆನ್ನಾಗಿತ್ತು. ಅವರ ಮೊದಲನೆಯ ಸಿನಿಮಾ 'ಘಟಶ್ರಾದ್ಧ'ಕ್ಕೆ ಸ್ವರ್ಣಪದಕ ಪಡೆದಿದ್ದರು. ಮಲೆನಾಡಿನ ಮಗಳಾದ ನನಗೆ ಕಾಸರವಳ್ಳಿ ಕುಟುಂಬದವರ ಬಗ್ಗೆ ಹೆಮ್ಮೆಯಿದೆ. ಅವರ ತಂಗಿ ಜಯಶ್ರೀ ಕಾಸರವಳ್ಳಿ ಕನ್ನಡದ ಜನಪ್ರಿಯ ಕತೆಗಾರ್ತಿ. ಗಿರೀಶ ಚಂದನವನಕ್ಕೆ ಇನ್ನಷ್ಟು ಸ್ವರ್ಣಪದಕಗಳನ್ನು ಗಳಿಸಿಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುವೆ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಕವಿಶೈಲದ ವೈಭವ

ಝೀ ಕನ್ನಡದ ರಿಯಾಲಿಟಿ ಶೋ 'ಭರ್ಜರಿ ಬ್ಯಾಚುಲರ್ಸ್' ಇತ್ತೀಚಿನ ಸಂಚಿಕೆ ತುಂಬಾ ಖುಷಿ ನೀಡಿತು. ಉತ್ತರಕನ್ನಡ, ದಕ್ಷಿಣಕನ್ನಡ, ಉತ್ತರ ಕರ್ನಾಟಕದ ಬ್ಯಾಚುಲರ್ಸ್ ತಮ್ಮ ಹಳ್ಳಿಯ ವಾತಾವರಣವನ್ನು ಅನಾವರಣಗೊಳಿಸಿದ್ದು ಬಹಳ ಭರ್ಜರಿಯಾಗಿತ್ತು.

ಅದರಲ್ಲೂ ಹುಲಿ ಕಾರ್ತಿಕ್ ರಸ ಋಷಿ ಕುವೆಂಪು ಬೆಳೆದ ಕವಿಶೈಲದ ಪ್ರಕೃತಿ ಸೌಂದರ್ಯವನ್ನು ತನ್ನ ಸಹ ಸ್ಪರ್ಧಿಗೆ ಪರಿಚಯಿಸಿದ್ದು ಮನಸ್ಸಿಗೆ ಹಿಡಿಸಿತು. ಗ್ರಾಮೀಣ ಪ್ರದೇಶದಲ್ಲಿ ಅತಿಥಿ ಸತ್ಕಾರಕ್ಕೆ ನೀಡುವ ಆದ್ಯತೆಯನ್ನು ಈ ಶೋ ತೋರಿಸಿಕೊಟ್ಟಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ವಾರದ ಪತ್ರ

## ಪಾಪದ ಪಾತ್ರಗಳು

ನಮ್ಮ ಪ್ರಮುಖ ಕನ್ನಡ ಧಾರಾವಾಹಿಗಳಲ್ಲಿ ಪೊಲೀಸ್ ಪಾತ್ರಗಳು ಅನಿವಾರ್ಯ ಎನಿಸುವಷ್ಟರ ಮಟ್ಟಿಗೆ ಪ್ರವೇಶ ಪಡೆಯುತ್ತಿವೆ. ಆದರೆ ಬಹುಪಾಲು ದೃಶ್ಯಗಳಲ್ಲಿ ವಕೀಲರನ್ನು ಮತ್ತು ಪೊಲೀಸರನ್ನು ನೋಡಿದರೆ ಪಾಪ ಎಂದೆನಿಸದೇ ಇರದು.

ಕೆಲವು ದೃಶ್ಯಗಳಲ್ಲಿ ಜೋಕರ್, ಪೆದ್ದು ಪೆದ್ದಾಗಿ ಕಾಣಿಸುತ್ತಾರೆ. ಇನ್ನೊಮ್ಮೆ ಭ್ರಷ್ಟ, ದುಷ್ಟರನ್ನಾಗಿ ಚಿತ್ರಿಸುತ್ತಾರೆ. 'ದೃಷ್ಟಿ ಬೊಟ್ಟು' ಧಾರಾವಾಹಿಯಲ್ಲಿ ಒಬ್ಬ ಪೊಲೀಸ್ ಮಹಿಳೆಗೆ ಹಿಂಸೆ ನೀಡುವುದು ಅತಿಯಾಯಿತು. 'ಲಕ್ಷ್ಮೀ ನಿವಾಸ'ದ ನಾಯಕಿ ಒಂದೆರಡು ಪುಸ್ತಕಗಳನ್ನು ಓದಿ ಬೆಳಿಗ್ಗೆ ಕೋರ್ಟ್‌ನಲ್ಲಿ ನ್ಯಾಯಾಧೀಶರ ಮುಂದೆ ವಾದ ಮಾಡುವುದು ಹಾಸ್ಯಾಸ್ಪದ ಅನ್ನಿಸುತ್ತದೆ. ಸಮಾಜದ ಹಿತ ಕಾಯುವ ವ್ಯಕ್ತಿ ಅಥವಾ ವೃತ್ತಿಗಳ ಬಗ್ಗೆ ಸಮಾಜಕ್ಕೆ ಉತ್ತಮ ಮಾಹಿತಿಯನ್ನು ನೀಡಬೇಕು. ಅದು ವೀಕ್ಷಕರ ಅರಿವನ್ನು ವಿಸ್ತರಿಸುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ನಿಲುವು ಬದಲಿಸಿದ ಝಾನ್ಸಿ



ಕಲರ್ಸ್ ಕನ್ನಡದ 'ಯಜಮಾನ' ಇತ್ತೀಚೆಗೆ ಆರಂಭವಾಗಿದ್ದು, ತನ್ನ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿದೆ. ದೊಡ್ಡ ಕಂಪನಿಯ ಯಜಮಾನಿ ಝಾನ್ಸಿ ಪುರುಷರನ್ನೇ ದ್ವೇಷಿಸುತ್ತಿದ್ದಳು. ಆಸ್ತಿಗಾಗಿ ಒಂದು ತಿಂಗಳ ಒಪ್ಪಂದದ ಮದುವೆಯನ್ನು ಮಾಡಿಕೊಳ್ಳುತ್ತಾಳೆ. ನಂತರ ದಿನ ಕಳೆದಂತೆ ಅವಳು ತನ್ನ ಗಂಡನ ಜೊತೆಗೆ ಬದುಕಬೇಕೆಂದು ಪಣತೊಡುತ್ತಾಳೆ. ಅದಕ್ಕಾಗಿ ಝಾನ್ಸಿ ಎಂತಹ ಕಷ್ಟವನ್ನಾದರೂ ಸಹಿಸಿಕೊಂಡು ಗಂಡನ ಮನೆಯಲ್ಲಿ ಬಾಳಲೇಬೇಕು ಎಂದು ಛಲವನ್ನು ತಾಳುತ್ತಾಳೆ.

—ಎನ್. ವೈದೇಹಿ, ಮೈಸೂರು

## ಓದಿಗೆ ಪ್ರೇರಣೆ ನೀಡುವ 'ಚಂದನ'

ಕನ್ನಡ ಕಂಪು ಬೀರುವ 'ಥಟ್ ಅಂತ ಹೇಳಿ' ಚಂದನದ ಜನಪ್ರಿಯ ಕಾರ್ಯಕ್ರಮ. ಕಿರಿಯರು–ಹಿರಿಯರಾದಿಯಾಗಿ ನೋಡಬಹುದಾದ ಉಪಯುಕ್ತವಾಗಿದೆ. ಸಾಹಿತ್ಯ, ಸಂಗೀತ, ಚರಿತ್ರೆ, ಸಂವಿಧಾನ, ವಿಜ್ಞಾನ, ತಂತ್ರಜ್ಞಾನವನ್ನು ಪರಿಚಯ ಮಾಡುತ್ತದೆ. ಸ್ಪರ್ಧಿಗಳಿಗೆ ಕನ್ನಡ ಪುಸ್ತಕಗಳನ್ನು ನೀಡಿ ಓದಲು ಪ್ರೇರೇಪಿಸುತ್ತಿದೆ.

—ಭಾರತೀ ಗಂಗಾಧರ್, ಬೆಂಗಳೂರು

## ಆಕರ್ಷಕ ಜಾಹೀರಾತೇ ಆದ್ಯತೆಯಾಗಲಿ

ಜಾಹೀರಾತುಗಳಿಗೂ ಧಾರಾವಾಹಿಗಳಿಗೂ ಅವಿನಾಭಾವ ಸಂಬಂಧವಿದೆ. ಎಷ್ಟೋ ಸಂದರ್ಭದಲ್ಲಿ ಅವರು ಹಾಕುವ ಜಾಹೀರಾತಿಗೂ ಮಾರುವ ಸಾಮಗ್ರಿಗೂ ಸಂಬಂಧವೇ ಇರುವುದಿಲ್ಲ. ಕೆಲವು ದೃಶ್ಯಗಳು ಅಶ್ಲೀಲದಂತೆ ತೋರುತ್ತವೆ. ಕೆಲವೊಂದು ಆಹ್ಲಾದಕರವಾಗಿರುತ್ತವೆ. ಉದಾ: ಒಂದು ಹುಡುಗಿ ಕೊಳಲು ನುಡಿಸಿಕೊಂಡು ಹೋಗುವಾಗ ಹಿಂಬಾಲಿಸಿಕೊಂಡು ಬರುವ ದನಗಳು. ಹಾಗೆಯೇ ಕೆಲವು ಮಕ್ಕಳ ಕುರಿತ ಜಾಹೀರಾತುಗಳು ಆಕರ್ಷಿಸುತ್ತವೆ. ಅಂತಹ ಸೃಜನಶೀಲ ಜಾಹೀರಾತುಗಳಿಗೆ ಆದ್ಯತೆ ಇರಲಿ.

—ಶ್ರುತಿ ಎಸ್., ಬೆಂಗಳೂರು

## ಅವಸರದಲ್ಲಿ ತಪ್ಪು ಸುದ್ದಿ ಬೇಕೆ?

ಜೂನ್12ರ ಮಧ್ಯಾಹ್ನ ಅಹಮದಾಬಾದ್ ವಿಮಾನ ನಿಲ್ದಾಣದ ಬಳಿಯ ಮೆಘಾನಿ ಎಂಬಲ್ಲಿ ವಿಮಾನ ಅಪಘಾತ ನಡೆದಾಗ ಕನ್ನಡ ಸುದ್ದಿ ವಾಹಿನಿಗಳು ನಾ ಮುಂದು ತಾ ಮುಂದು ಎಂಬಂತೆ ವರದಿ ಪಸರಿಸುತ್ತಿದ್ದವು.

ಸ್ಪರ್ಧಾತ್ಮಕವಾಗಿ ತಮ್ಮದೇ ಮೊದಲು ಎಂಬ ಭರದಲ್ಲಿ ಪೈಪೋಟಿ ನೀಡಿದ್ದರು.

ಒಂದು ವಾಹಿನಿ ವಿಮಾನ ಟೇಕ್ ಆಫ್ ಆದಾಗ ಅಪಘಾತ ಸಂಭವಿಸಿತೆಂದು ಹೇಳಿದರೆ ಇನ್ನೊಂದು ವಾಹಿನಿ ವಿಮಾನ ಲ್ಯಾಂಡಿಂಗ್ ಆಗುವಾಗ ಅಪಘಾತವಾಯಿತೆಂದು ಅವಸರವಸರದಲ್ಲಿ ವರದಿ ಮಾಡಿದವು.

ಮತ್ತೊಂದು ವಾಹಿನಿ ವಿಮಾನದಲ್ಲಿ 242 ಪ್ರಯಾಣಿಕರಿದ್ದರೆಂದು ಅಪ್ ಡೇಟ್ ನೀಡಿದರೆ ಮತ್ತೊಂದು 232 ಪ್ರಯಾಣಿಕರಿದ್ದರೆಂದು ಮೊದಲು ತಿಳಿಸಿ ನಂತರ 242 ಜನರಿದ್ದರೆಂದು ದೃಢೀಕರಿಸಿತು.

ವಾರ್ತಾವಾಹಿನಿಗಳು ಹೀಗೆ ತರಾತುರಿಯಲ್ಲಿ ತಪ್ಪು ಮಾಹಿತಿ ನೀಡುವ ಬದಲು ನಿಗದಿತ ಸಮಯಗಳಲ್ಲಿ ನಿಖರ ಮಾಹಿತಿ ನೀಡಿ ನಂಬಲರ್ಹ ವಾಹಿನಿ ಎಂದೆನಿಸಿಕೊಳ್ಳಬಹುದಲ್ಲವೆ?

—ರಮಣ್ ಶೆಟ್ಟಿ ರೆಂಜಾಳ, ಮುಂಬೈ.